


ಚಿತ್ರದುರ್ಗದ ಟಂಕಸಾಲೆಯ ಬಾಗಿಲ ತೊಲೆ



# ಕಾಡಿನ ಶ್ವೇತಕನ್ನಿಕೆ ನಂದಿ ಮರ

**ಬಿಳುಪಿನೊಂದಿಗೆ ಹೊಳಪಿನಿಂದಲೂ ಸೆಳೆಯುವ ನಂದಿ ಮರ ಇಂಗ್ಲಿಷ್ ಫೇರಿ ಟೇಲ್ಸ್‌ನ ಶ್ವೇತಕನ್ನಿಕೆಯನ್ನು ಹೋಲುವಂತೆ ಭಾಸವಾಗುತ್ತದೆ. ಇದರ ಬಲಿಷ್ಠತೆ ಅಚ್ಚರಿ ಹುಟ್ಟಿಸುತ್ತದೆ.**

■ ವಿನು ಗಂಗೆ

ಇಂಗ್ಲಿಷಿನ ಹೆಸರಾಂತ ದಂತಕತೆಯಾದ **Beauty and the Beast** ನಿಮಗೆ ತಿಳಿದಿರಬಹುದು. ಸುಂದರಿಯೊಬ್ಬಳು ತನ್ನ ತಂದೆಯನ್ನು ಉಳಿಸುವ ಸಲುವಾಗಿ ದುಷ್ಟ ಮೃಗವನ್ನು ಮದುವೆಯಾಗುತ್ತಾಳೆ. ಯಾರದೋ ಶಾಪಕ್ಕೀಡಾದ ರಾಜಕುಮಾರನೇ ಆ ಮೃಗ. ಮುಂದೊಂದು ದಿನ ಆ ಮೃಗದ ನೋವಿಗೆ ಅವಳ ಅಂತಃಕರಣ ಮಿಡಿದು, ಅವಳ ಕಣ್ಣೀರ ಹನಿ ಮೃಗದ ಮೈಮೇಲೆ ಬಿದ್ದೊಡನೆ ಶಾಪವಿಮೋಚನೆ ಹೊಂದಿ ಮರಳಿ ರಾಜಕುಮಾರನಾಗುವ ಕತೆಯದು.

ನಮ್ಮ ಮರಗಳ ಕತೆ ಎಲ್ಲಿ, ಇಂಗ್ಲಿಷಿನ **fairy tale** ಎಲ್ಲಿ? ನೋಡೋಣ ಬನ್ನಿ.

ನೀವು ಕಾಡಿನಲ್ಲೋ ಅಥವಾ ಹಳ್ಳಿಗಳ ಕಡೆ ಕಾಲುದಾರಿಯಲ್ಲೋ ಓಡಾಡುವಾಗ ಒಂದು ಬೆಳ್ಳನೆ ಹೊಳಪಿನ ಮರ ಕಣ್ಣಿಗೆ ಬಿದ್ದಿರುತ್ತದೆ. ನೀಲಗಿರಿ, ಬಿಳಿ ಬಸರಿ, ಕಾಡು ಬೆಲಲ, ಹೊಳೆ ಮತ್ತಿ ಈ ಎಲ್ಲಾ ಮರಗಳ ಕಾಂಡ ಸಾಧಾರಣ ಬೆಳ್ಳಗೇ ಇದ್ದರೂ, ಈ ಮರ ತನ್ನ ವಿಶಿಷ್ಟ ಬಿಳುಪು ಮಾತ್ರವಲ್ಲ ತನ್ನ ಹೊಳಪಿನಿಂದ ಕೂಡ ನಮ್ಮನ್ನು ಸೆಳೆಯುತ್ತದೆ. ಅದೇ ನಂದಿಮರ. **Lagerstroemia microcarpa** ಇದರ ವೈಜ್ಞಾನಿಕ ಹೆಸರು. ಮರದ ಬೆಳ್ಳನೆಯ ಹೊಳಪಿನ ಮೈ, ನಮ್ಮವರಿಗೆ ಶಿವನ ಹೊತ್ತ ಬಸವನ ನೆನಪು ತಂದಿರಬೇಕು, ಹಾಗಾಗಿ ಇಲ್ಲಿ ಇದರ ಹೆಸರು ನಂದಿಮರ.

ಮರದ ತೊಗಟೆ ಪದರು ಪದರಾಗಿ ಹಾಳೆಯಂತೆ ಆಗಾಗ ಸುಲಿದು ಉದುರಿ ಹೋಗುತ್ತದೆ. ಈ ಪ್ರಕ್ರಿಯೆಗೆ ಚಂದದ ಒಂದು ಜಾನಪದ ಕತೆಯೂ ಇದೆ. ಕೈಲಾಸದಲ್ಲಿ ನಂದಿಯು ಒಮ್ಮೆ ಶಿವನಿಗೆ 'ಶಿವನೇ, ಭೂಲೋಕದಲ್ಲಿ ನನ್ನ ವಂಶಜರು ಮಾನವರಿಗಾಗಿ ರೈತಾಪಿ ಕೆಲಸಗಳಲ್ಲಿ ಸಹಾಯಕರಾಗಿ ದುಡಿಯುತ್ತಿದ್ದಾರೆ. ಆದರೆ ದುಷ್ಟ ಮಾನವರು ಕೋಲಿನಿಂದ, ಚಾಟಿಯಿಂದ ನನ್ನವರನ್ನು ಹೊಡೆದು ಬಡಿದು ದುಡಿಸಿಕೊಳ್ಳುತ್ತಾರೆ. ಛಡಿ ಏಟಿನಿಂದ ನನ್ನ ಬಾಂಧವರು ನೋವುಣ್ಣುವುದು ನಾನು ಸಹಿಸಲಾರೆ. ದಯೆ ತೋರು' ಎಂದಿತಂತೆ.

ಶಿವನು ಅದಕ್ಕೆ 'ಎಲೈ ನಂದಿ ಬಸವ, ನಿನ್ನ ವಂಶಜರಿಗೆ ಬಿದ್ದ ಏಟಿನ ನೋವನ್ನು ಒಂದು ಮರಕ್ಕೆ ವರ್ಗಾಯಿಸುತ್ತೇನೆ, ಅವುಗಳಿಗೆ ಬಿದ್ದ ಏಟಿನಿಂದ ಎತ್ತಿನ ಮೈ ಚರ್ಮ ಸುಲಿಯುವ ಬದಲು ಈ ಮರದ ತೊಗಟೆ ಸುಲಿದು ನೋವು ನಿವಾರಿಸಿಕೊಳ್ಳಲಿ. ಆ ಮರಕ್ಕೆ ನಿನ್ನದೇ ಹೆಸರಾಗಲಿ! ತಥಾಸ್ತು!' ಎಂದು ನಂದಿ ಮರವನ್ನು ಸೃಷ್ಟಿಸಿದನಂತೆ. ಈ ಕತೆ ಮನುಷ್ಯರು ಮೂಕ ಎತ್ತುಗಳನ್ನು ಹೊಡೆಯುವುದನ್ನು ವೃಥಾ ಸಮರ್ಥಿಸುವಂತೆ ತೋರಿದರೂ, ನಿಸರ್ಗ ಸಹಜ ಪ್ರಕ್ರಿಯೆಯನ್ನು ಕತೆಯಲ್ಲಿ ಜೋಡಿಸಿರುವ ಜಾನಪದವನ್ನು ಮೆಚ್ಚಲೇಬೇಕು.

ಹೀಗೆ ಸದಾ ತೊಗಟೆ ಸುಲಿಯುವುದಕ್ಕಾಗಿ ನಂದಿಯ ಕಾಂಡಕ್ಕೆ ಹೊಳಪಿರುತ್ತದೆ. ಹಿಂದೆ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಇಲ್ಲಿನ ಕಾಡಿನಲ್ಲಿ ಹೋಗುತ್ತಾ ಯಾವುದೋ ಬ್ರಿಟಿಷ್ ಅಧಿಕಾರಿಯ ಕಣ್ಣಿಗೆ ಈ ಮರದ ಬೆಳ್ಳನೆಯ ಹೊಳಪಾದ ಕೊಂಚವೇ ಬಳುಕುವಂತೆ ಕಾಣುವ ಕಾಂಡ ಹೆಣ್ಣಿನ ನೆನಪು ತಂದಿರಬಹುದು. ಹಾಗಾಗಿ ಈ ಮರಕ್ಕೆ **Nude lady of the forest**, ಅಂದರೆ ಕಾಡಿನ ಬೆತ್ತಲೆ ಹೆಣ್ಣು ಎಂಬ ಹೆಸರಿದೆ. ಅಂತೆಯೇ, ನಮ್ಮ ಜಾನಪದ ಕತೆಯಲ್ಲಿ ಎತ್ತು (ಪಶು)ಗಳ ನೋವಿಗೆ ಮಿಡಿಯುವ ಅಂತಃಕರಣ ಇರುವಂತಹ, ಬೆಳ್ಳನೆ ಹೊಳಪಿನ ನಂದಿ ಮರವು ಇಂಗ್ಲಿಷ್ **Fairy tale**ನ ಶ್ವೇತಕನ್ನಿಕೆಯನ್ನು ಹೋಲುವಂತೆ ಭಾಸವಾಗುತ್ತದೆ.

ಚಾಮರಾಜನಗರ ಭಾಗದಲ್ಲಿ ನಂದಿ ಮರದ ನಾಟಾದಿಂದ ಮಾಡಿದ ತೇರಿನಿಂದ ಜಾತ್ರೆಯಲ್ಲಿ ಶಿವನನ್ನು ದೇವರಗುಡ್ಡ (ಪೂಜಾರಿ) ಹೊತ್ತು ತರುವ ಪದ್ಧತಿ ಇದೆಯಂತೆ. ನಾಟಾಕ್ಕೆ ನೀರು ತಾಳಿಕೊಳ್ಳುವ ಶಕ್ತಿ ಹಾಗೂ ಗೆದ್ದಲು ನಿರೋಧಕ ಶಕ್ತಿ ಇರುತ್ತದೆ. ಅದಕ್ಕಾಗಿ ಮನೆ ಕಟ್ಟುವುದಕ್ಕೆ, ಕೃಷಿ ಸಲಕರಣೆಯಾಗಿ, ದೋಣಿ ಮಾಡಲು, ಇತ್ಯಾದಿ ಕೆಲಸಕ್ಕೆ ಬಳಕೆಯಾಗುತ್ತದೆ.

ಇತ್ತೀಚೆಗೆ ಚಿತ್ರದುರ್ಗ ಕೋಟೆಯನ್ನು ನೋಡಲು ಹೋದಾಗ ಅಲ್ಲಿನ ನಾಯಕರ ಕಾಲದ ಟಂಕಸಾಲೆ ನೋಡಿದೆ. ಮಳೆ ಬಿಸಿಲಿಗೆ ತೆರೆದುಕೊಂಡಿರುವ ಟಂಕಸಾಲೆಯ ಮಣ್ಣು, ಗಾರೆ ಮಿಶ್ರಿತ ಗೋಡೆಯ ನಡುವಿನ ಬಾಗಿಲಿನ ಮೇಲಿನ ತೊಲೆಗೆ ನಂದಿ ಮರದ ಹಲಗೆ ಜೋಡಿಸಲಾಗಿದೆ. ಹಲವು ಶತಮಾನಗಳ ಕಾಲ ಬಿಸಿಲು, ಮಳೆ, ಗೆದ್ದಲು ಎಲ್ಲವನ್ನೂ ತಾಳಿಕೊಂಡು ಅಷ್ಟೆತ್ತರ ಗೋಡೆಯ ಭಾರವನ್ನು ಹಿಡಿದು ಒಂದಿಷ್ಟೂ ಮುಕ್ಕಾಗದ ಹಲಗೆಯನ್ನು ನೋಡಿದಾಗ ಹಿಂದಿನವರ ನಾಟಾ ಹದಗೊಳಿಸುವ ಅದ್ಭುತ ಕೌಶಲದ ಜೊತೆಗೆ ನಂದಿ ಮರದ ಬಲಿಷ್ಠತೆ ಅಚ್ಚರಿ ಹುಟ್ಟಿಸುತ್ತದೆ. ಹೆಚ್ಚು ದಟ್ಟಣೆ ಇರದ ಕಾರಣ ಕಾಫಿ ತೋಟದಲ್ಲೂ ಇದನ್ನು ಮಧ್ಯೆ ಮಧ್ಯೆ ಬೆಳೆಸಿರುತ್ತಾರೆ. ದಕ್ಷಿಣ ಭಾರತದಾದ್ಯಂತ ಈ ಮರಗಳು ಬೆಳೆಯಬಲ್ಲವು. ನಮ್ಮ ತೋಟದಲ್ಲಿ ಕೂಡ ಮರವಾಗುತ್ತಿದೆ. ಎಲ್ಲ ಕಡೆಯೂ ಅಂತಃಕರಣ ಬೆರೆತ ಬಲಿಷ್ಠ ನಂದಿಯ ಹೊಳಪು ಕಂಗೊಳಿಸುವಂತೆ ಮಾಡೋಣವೇ? ■